**ಕರ್ನಾಟಕ ಸರ್ಕಾರ**

**ವಾಣಿಜ್ಯ ತೆರಿಗೆಗಳ ಇಲಾಖೆ**

ಕರ್ನಾಟಕ ಸರ್ಕಾರ

**(ವಾಣಿಜ್ಯ ತೆರಿಗೆಗಳ ಇಲಾಖೆ)**

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾಗೃತಿ), ವಾಣಿಜ್ಯ ತೆರಿಗೆ ಕಾರ್ಯಾಲಯ-2,
3ನೇ ಮಹಡಿ, ಎ-ಬ್ಲಾಕ್, ಕೋರಮಂಗಲ, ಬೆಂಗಳೂರು-560047
ದೂರವಾಣಿ: 080-25704961/62

---

ಸಂಖ್ಯೆ:ವಾತೆಜಂಆ(ಜಾ)/ಸಿಬ್ಬಂದಿ-1/ವಾಹನ/ಸಿಆರ್-17/2016-17 ದಿನಾಂಕ: 0406.2016.

## ಸಾಮಾನ್ಯ ಟೆಂಡರ್ ಪ್ರಕಟಣೆ

ವಿಷಯ: ವಾಣಿಜ್ಯ ತೆರಿಗೆ ಇಲಾಖೆಯಲ್ಲಿನ ಈ ವಿಭಾಗಕ್ಕೆ ಸಾಮಾನ್ಯ ಟೆಂಡರ್ ಪ್ರಕ್ರಿಯೆ ಮುಖೇನ ಒಂದು ಖಾಸಗಿ ವಾಹನವನ್ನು ಬಾಡಿಗೆಗೆ ಪಡೆದುಕೊಳ್ಳುವ ಬಗ್ಗೆ

ಉಲ್ಲೇಖ: 1. ಮಾನ್ಯ ವಾಣಿಜ್ಯ ತೆರಿಗೆ ಆಯುಕ್ತರು(ಕ), ಬೆಂಗಳೂರು ರವರ ಪತ್ರ ಸಂಖ್ಯೆ: ವಿಹೆಚ್‌ಟಿ/ಸಿಆರ್-20/2013-14, ದಿನಾಂಕ: 30.09.2014 ಮತ್ತು ಸತ್ತೋಲೆ ಸಂಖ್ಯೆ: 1, ದಿನಾಂಕ:21.04.2016

2. ವಾಣಿಜ್ಯ ತೆರಿಗೆ ಅಪರ ಆಯುಕ್ತರು(ಕೇಂ.ಕ)-2, ರವರ ಪತ್ರ ದಿ:20.05.2016.

******

1) ಮೇಲಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಪಟ್ಟಂತೆ ಈ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ಜಾಗೃತಿ ಕಾರ್ಯ, ವರ್ತಕರ ವ್ಯಾಪಾರ, ವಹಿವಾಟು ತಪಾಸಣೆ ಹಾಗೂ ಸರ್ವೆ ಕಾರ್ಯ ಮತ್ತು ಕಛೇರಿಯ ಉಪಯೋಗಕ್ಕಾಗಿ ಒಂದು ಬಾಡಿಗೆ ವಾಹನವನ್ನು ಉಲ್ಲೇಖ(2)ರಂತೆ ಗರಿಷ್ಠ ರೂ.25,000-00ಗಳ ಮಾಸಿಕ ಬಾಡಿಗೆ ದರದ ಗುತ್ತಿಗೆಯ ಆಧಾರದ ಮೇಲೆ ಪಡೆಯಲು ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರವರಿಂದ ನಿರ್ದೇಶಿಸಲಾಗಿದೆ. ಆದ್ದರಿಂದ ಅರ್ಹತೆಯುಳ್ಳ ವಾಹನ ಮಾಲೀಕರೇ ಚಾಲಕರಾಗಿರುವ ವ್ಯಕ್ತಿಗಳು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ. ಈ ಕೆಳಕಂಡ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ವಾಹನವನ್ನು ಒದಗಿಸಲು ಸೀಲ್ ಮಾಡಿದ ಲಕೋಟೆಯಲ್ಲಿ ಖುದ್ದು ಸಲ್ಲಿಸಬಹುದಾಗಿದೆ. ಆಸಕ್ತ ಒಬ್ಬ ವಾಹನ ಮಾಲೀಕ/ಚಾಲಕರು ಒಂದು ವಾಹನದ ಸೇವೆಗೆ ಮಾತ್ರ ಅರ್ಜಿಯನ್ನು ಸಲ್ಲಿಸುವುದು. ಉಲ್ಲೇಖ ಪತ್ರದಲ್ಲಿ ತಿಳಿಸಿರುವ ನಿಯಮಗಳನ್ವಯ 2011 ರ ಮತ್ತು ನಂತರದ ಮಾದರಿಯ ಹಳದಿ ಬಣ್ಣದ ಬೋರ್ಡ್ ಹೊಂದಿರುವ ಟ್ಯಾಕ್ಸಿ ವಾಹನಗಳ ಸೇವೆಯನ್ನು ಮಾತ್ರ ಪಡೆಯಲಾಗುವುದು.

1. **ಮುಚ್ಚಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 20.06.2016 ಸಮಯ: 5 ಘಂಟೆಯವರೆಗೆ.**
2. **ಟೆಂಡರ್‌ಗಳನ್ನು ತೆರೆಯುವ ದಿನಾಂಕ: 21.06.2016.**
3. **ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಅಂತಿಮ ಪಟ್ಟಿಯನ್ನು ಪ್ರಕಟಿಸುವ ದಿನಾಂಕ: 30.06.2016.**
4. **ಟೆಂಡರ್‌ನ ಅವಧಿ:01-07-2016 ರಿಂದ 31-03-2017.**

2) ವಾಹನದ ಪರವಾನಗಿಯ ದಿನಾಂಕ: 01-06-2016 ರಿಂದ 31-03-2017ರವರೆಗೆ ಚಾಲ್ತಿಯಲ್ಲಿ ಇರತಕ್ಕದ್ದು. ವಾಹನದ ಮಾಡೆಲ್ 2011 ಅಥವಾ ನಂತರದ ವರ್ಷದ ಮಾಡೆಲ್‌ಗಳು ಅರ್ಹವಾಗಿರುತ್ತವೆ. ಮೊದಲು ದಾಖಲೆ ಸಲ್ಲಿಸಿದವರಿಗೆ, ಉತ್ತಮ ಸ್ಥಿತಿಯ ಮತ್ತು ಇತ್ತೀಚಿನ ಮಾಡೆಲ್ ವಾಹನಗಳಿಗೆ ಆದ್ಯತೆ ಕೊಡಲಾಗುವುದು.

3) ಈ ವಿಭಾಗದ ಮುಖ್ಯಸ್ಥರು ಕಛೇರಿಯ ಕೆಲಸ ಕಾರ್ಯಗಳಿಗೆ ಅನುಗುಣವಾಗಿ ತಕ್ಷಣಕ್ಕೆ ಲಭ್ಯವಿರುವ ವಾಹನವನ್ನು ಬಾಡಿಗೆಯ ಮೇಲೆ ತೆಗೆದುಕೊಳ್ಳುವ ಸಂದರ್ಭದಲ್ಲಿ ವಾಹನದ ಗುಣಮಟ್ಟವನ್ನು ಮತ್ತು ಚಾಲನಾ ಕೌಶಲ್ಯವನ್ನು ಪರೀಕ್ಷೆಗೆ ಒಳಪಡಿಸಲಾಗುವುದು. ಯಾವುದೇ ಕಾರಣ ನೀಡದೆ ವಾಹನವನ್ನು ಬದಲಿಸುವ, ತಕ್ಷಣವೇ ನಿರಾಕರಿಸುವ ಹಕ್ಕು ಜಂಟಿ ಆಯುಕ್ತರಿಗೆ ಇರುತ್ತದೆ.

4) ವಾಣಿಜ್ಯ ತೆರಿಗೆ ಇಲಾಖೆಯು ಅಗತ್ಯವಿರುವ ವಾಹನಗಳನ್ನು ಇ-ಸಂಗ್ರಹಣೆ ಮುಖಾಂತರ ಬಾಡಿಗೆಗೆ ಪಡೆದುಕೊಳ್ಳಲು ಈ ಮೇಲೆ ಪ್ರಸ್ತಾಪಿಸಿರುವಂತೆ ಉಂಟಾಗುವ ತಾಂತ್ರಿಕ ಅಡಚಣೆಗಳ ಕಾರಣದಿಂದ ಇ-ಸಂಗ್ರಹಣೆಗೆ ಪರ್ಯಾಯವಾಗಿ ಸಾಮಾನ್ಯ ಟೆಂಡರ್ ಪ್ರಕ್ರಿಯೆಯ ಮುಖೇನ ವಾಹನಗಳ ಸೇವೆಯನ್ನು ಪಡೆದುಕೊಳ್ಳಲು ಸಾಧ್ಯವಾಗುವಂತೆ ಕೆ.ಟಿ.ಪಿ.ಪಿ.ಅಧಿನಿಯಮದ ನಿಯಮ 4(ಜಿ)ಗೆ ಆದೇಶ ಸಂ:ಆಇ406 ವೆಚ್ಚ-12/2014, ದಿ:16.05.2014 ರಲ್ಲಿ ಸರ್ಕಾರವು ವಿನಾಯಿತಿಯನ್ನು ನೀಡಿರುತ್ತದೆ.

5) ಈ ವಿಭಾಗದ ಮುಖ್ಯಸ್ಥರಾದ ಜಂಟಿ ಆಯುಕ್ತರು(ಜಾಗೃತಿ), ಬೆಂಗಳೂರು ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಅನ್ವಯ ಟೆಂಡರ್ ಕರೆಯುವ ಮತ್ತು ಅಂಗೀಕರಿಸುವ ಅಧಿಕಾರ ಹೊಂದಿರುತ್ತಾರೆ(Tender inviting and other accepting Authority).

6) ಟೆಂಡರಿನ ನಿಬಂಧನೆಗಳು, ಷರತ್ತುಗಳು, ನಮೂನೆ ಮತ್ತು ಇತರೆ ವಿವರಗಳನ್ನು ಈ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿರುತ್ತದೆ.

7) <u>ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು/ವಿವರಗಳು.</u>

1. ಅರ್ಜಿದಾರರ ಹೆಸರು, ವಿಳಾಸ ಹಾಗೂ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳು- 2
2. ವಿಳಾಸದ ದಾಖಲೆ (ಮತದಾರರ ಗುರುತಿನ ಚೀಟಿ/ ರೇಷನ್‌ಕಾರ್ಡ್/ ಆಧಾರ್ ಕಾರ್ಡ್/ಪಾಸ್‌ಪೋರ್ಟ್ ಅಥವಾ ಇತರೆ ಭಾವಚಿತ್ರ ಹೊಂದಿರುವ ಗುರುತಿನ ಚೀಟಿ).
3. ಪ್ಯಾನ್ ಕಾರ್ಡ್ ಪ್ರತಿ.
4. ವಾಹನದ ನೋಂದಣಿ ಪುಸ್ತಕದ ಪ್ರತಿ.
5. ವಾಹನದ ವಿಮಾ ಪಾಲಿಸಿಯ ಪ್ರತಿ.
6. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನೀಡಿರುವ ವಾಹನ ಚಾಲನಾ ಪರವಾನಗಿ ಪ್ರತಿ.